# ‘ಮೈ-ಮನ’: ಅಸ್ತಿತ್ವದ ಶೋಧ ಹಾಗೂ ಸಾಮಾಜಿಕ ಪ್ರತಿರೋಧ


## ಕಲ್ಪನಾ*



**DOI: https://doi.org/10.5281/zenodo.20613790**



**ABSTRACT**

ಪ್ರಸ್ತುತ ಸಂಶೋಧನಾ ಲೇಖನವು ಲಕ್ಷ್ಮಣ್ (ಮಾಳವಿಕಾ) ಕನಕುಂಟ್ಲಾ ಅವರ ‘ಮೈ-ಮನ’ ಕವನ ಸಂಕಲನವನ್ನು ಆಕರವಾಗಿರಿಸಿಕೊಂಡು, ತೃತೀಯ ಲಿಂಗಿ ಸಮುದಾಯದ ಅಸ್ಮಿತೆ, ಸಾಮಾಜಿಕ ಬಹಿಷ್ಕಾರ ಮತ್ತು ವ್ಯವಸ್ಥಿತ ಸಂಘರ್ಷಗಳನ್ನು ವಿಶ್ಲೇಷಿಸುತ್ತದೆ. ಪ್ರಸ್ತುತ ಕವನ ಸಂಕಲನವು ಹೇಗೆ ವೈಯಕ್ತಿಕ ನೋವನ್ನು ಸಾಮುದಾಯಿಕ ಪ್ರತಿರೋಧವನ್ನಾಗಿ ಪರಿವರ್ತಿಸುತ್ತದೆ ಮತ್ತು ಕನ್ನಡ ಸಾಹಿತ್ಯಿಕ ಸಂದರ್ಭದಲ್ಲಿ ಈ ಕೃತಿಯ ಮಹತ್ವವೇನು ಎಂಬುದನ್ನು ಈ ಲೇಖನದಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಇಲ್ಲಿನ ಕವಿತೆಗಳು ಲಿಂಗತ್ವದ ಸಂಕೋಲೆಗಳ ನಡುವೆ ಸಿಲುಕಿದ ಜೀವಗಳ ಅಂತರಾಳದ ತುಡಿತವನ್ನು ಅಭಿವ್ಯಕ್ತಿಸುತ್ತವೆ. ಜೊತೆಜೊತೆಗೇ ಅಂಚಿನ ಅಸ್ಮಿತೆಗಳಿಗೆ ಘನತೆಯ ಬದುಕು ಸಿಗಬೇಕಾದ ಅನಿವಾರ್ಯತೆಯನ್ನು ಸಾರಿ ಹೇಳುತ್ತದೆ. ಸಮಾಜವು ನಿರ್ಮಿಸಿರುವ ತಾರತಮ್ಯದ ಬೇಲಿಗಳನ್ನು ದಾಟಿ, ಮನುಷ್ಯತ್ವದ ನೆಲೆಯಲ್ಲಿ ಸಮಾನತೆಯನ್ನು ಹಂಬಲಿಸುವ ಕವಯಿತ್ರಿಯ ಪ್ರತಿರೋಧದ ದನಿಯನ್ನು ಈ ಲೇಖನವು ಸಂಶೋಧನಾತ್ಮಕವಾಗಿ ಚರ್ಚಿಸುತ್ತದೆ.



**KEYWORDS:** ಮೈ-ಮನ, ತೃತೀಯ ಲಿಂಗಿ, ಲೈಂಗಿಕ ಅಲ್ಪಸಂಖ್ಯಾತರು, ಅಂಚಿನ ಅಸ್ಮಿತೆ, ಲಿಂಗತ್ವ, ಲೈಂಗಿಕತೆ, ಅನ್ಯ



* **ಕಲ್ಪನಾ,** ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಡುಗುಡಿ, ಬೆಂಗಳೂರು.

ಇಪ್ಪತ್ತೊಂದನೇ ಶತಮಾನದ ಸಾಹಿತ್ಯ ಲೋಕವು ಒಂದು ವಿಶಿಷ್ಟವಾದ ಆತ್ಮಕಥನಾತ್ಮಕವಾದ ಕ್ರಾಂತಿಗೆ ಸಾಕ್ಷಿಯಾಗುತ್ತಿದೆ. ಕಳೆದ ಶತಮಾನದ ಉತ್ತರಾರ್ಧದಲ್ಲಿ ಜಗತ್ತಿನಾದ್ಯಂತ ಸಂಭವಿಸಿದ ಸಾಮಾಜಿಕ ಪಲ್ಲಟಗಳು ಸಾಹಿತ್ಯದ ಪರಿಭಾಷೆಯನ್ನೇ ಬದಲಿಸಿವೆ. ಕನ್ನಡದ ಸಂದರ್ಭದಲ್ಲಿ ದಲಿತ, ಬಂಡಾಯ ಮತ್ತು ಸ್ತ್ರೀವಾದಿ ಚಳುವಳಿಗಳು ಅಕ್ಷರ ಸಂಸ್ಕೃತಿಯಲ್ಲಿ ಒಂದು ಹೊಸ ಪ್ರಜಾಪ್ರಭುತ್ವವನ್ನು ನಿರ್ಮಿಸಿ, ಸಮಾಜದ ಅಂಚಿಗೆ ತಳ್ಳಲ್ಪಟ್ಟ ಧ್ವನಿಗಳು ತಮ್ಮ ನೋವು, ಅವಮಾನ ಮತ್ತು ಅಸ್ಮಿತೆಯನ್ನು ತಾವೇ ದಾಖಲಿಸುವಂತೆ ಮಾಡಿವೆ. ಈ ಸಾಹಿತ್ಯವು ಬದುಕು ಮತ್ತು ಬಂಡಾಯದ ಮುಖವಾಣಿಯಾಗಿ ವ್ಯಕ್ತಿಯ ಅಸ್ಮಿತೆಯನ್ನು ಮತ್ತು ಶರೀರದ ರಾಜಕಾರಣವನ್ನು ಮುನ್ನೆಲೆಗೆ ತಂದಿವೆ. ಇಂದು ಸಾಹಿತ್ಯವು ಕೇವಲ ಕಲ್ಪನಾ ವಿಲಾಸವಾಗಿ ಉಳಿಯದೆ, ಸಮಾಜದ ಕಣ್ಣಿಗೆ ಕಾಣದ ಅಥವಾ ಸಮಾಜವು ನೋಡಲು ಇಷ್ಟಪಡದ ಅದೃಶ್ಯ ಜಗತ್ತುಗಳನ್ನು ಅನಾವರಣಗೊಳಿಸುತ್ತಿದೆ. ವಿಶೇಷವಾಗಿ ಇತ್ತೀಚಿನ ದಶಕಗಳಲ್ಲಿ ಅಂಚಿನ ಸಮುದಾಯಗಳು ತಮ್ಮ ಅನುಭವಗಳನ್ನು ತಾವೇ ಸೃಜಿಸುವ ಮೂಲಕ ಅನುಭವದ ಏಕಸ್ವಾಮ್ಯವನ್ನು ಪ್ರಶ್ನಿಸುತ್ತಿವೆ. ಈ ಕಾಲಘಟ್ಟದಲ್ಲಿ ಕಾವ್ಯವು ಕೇವಲ ರೂಪಕಗಳ ಆಟವಾಗದೆ, ಅಸ್ತಿತ್ವದ ಉಳಿವಿಗಾಗಿ ನಡೆಸುವ ನೇರ ಸಂವಾದವಾಗಿ ರೂಪಾಂತರಗೊಂಡಿದೆ.

ಇಂತಹ ಒಂದು ಮಹತ್ವದ ಸಾಹಿತ್ಯಿಕ ಪಲ್ಲಟದ ಹಾದಿಯಲ್ಲಿ, ಅಸ್ಮಿತೆಯ ಶೋಧದ ಪಯಣದಲ್ಲಿ ಅತ್ಯಂತ ನಿರ್ಲಕ್ಷಿತವಾಗಿದ್ದ ಲೈಂಗಿಕ ಅಲ್ಪಸಂಖ್ಯಾತ ಸಮುದಾಯವು ತನ್ನ ಮೌನವನ್ನು ಮುರಿದು, ತನ್ನ ಒಡಲ ಕಿಚ್ಚನ್ನು ಕಾವ್ಯವಾಗಿಸುವ ಮೂಲಕ ಸಮಾಜದ ಕಣ್ಣು ತೆರೆಸುವ ಹಂತಕ್ಕೆ ಬಂದು ನಿಂತಿದೆ. ಇಷ್ಟು ದಿನ 'ಅನ್ಯರು' ಎಂದು ಕರೆಯಲ್ಪಟ್ಟ ಧ್ವನಿಗಳು ಇಂದು 'ನಾವೇ ನಮ್ಮ ಕಥೆಗಾರರು' ಎಂದು ಘೋಷಿಸುವ ಮಟ್ಟಕ್ಕೆ ಬಂದಿವೆ. ಯಾವ ದೇಹದ ಅಸ್ತಿತ್ವವನ್ನು ಸಮಾಜವು ಕೇವಲ ಅಸಹಜತೆಯ ಚೌಕಟ್ಟಿನಲ್ಲಿ ಬಂಧಿಸಿತ್ತೋ, ಅದೇ ದೇಹ (ಮೈ ) ಮತ್ತು ಅಂತರಂಗದ (ಮನ) ಹಂಬಲಗಳನ್ನು 'ಮೈ–ಮನ' ಕವನ ಸಂಕಲನ (2023)ದ ಮೂಲಕ ಅಕ್ಷರ ರೂಪಕ್ಕೆ ಇಳಿಸಿರುವುದು ಲಕ್ಷ್ಮಣ್ (ಮಾಳವಿಕಾ) ಕನಕುಂಟ್ಲಾ ಅವರ ಒಂದು ಕ್ರಾಂತಿಕಾರಿ ಹೆಜ್ಜೆ. ಇದು ಕನ್ನಡದ ಸಾಂಪ್ರದಾಯಿಕ ಕಾವ್ಯದ ಗಡಿಗಳನ್ನು ವಿಸ್ತರಿಸಿರುವುದು ಮಾತ್ರವಲ್ಲದೆ, ಸಮಾಜದ ಮಡಿವಂತಿಕೆಯ ಮೌನವನ್ನು ಮುರಿಯುವ ಒಂದು ಪ್ರಬಲ ಪ್ರತಿರೋಧವಾಗಿ ಕಾಣಿಸುತ್ತಿದೆ.

ಮಾಳವಿಕಾ ಅವರು ತಮ್ಮ ಕವಿತೆಗಳ ಮೂಲಕ ಲಿಂಗ, ಲಿಂಗತ್ವ ಮತ್ತು ಲೈಂಗಿಕತೆಯಂತಹ ಸಂಕೀರ್ಣ ಪರಿಕಲ್ಪನೆಗಳನ್ನು ಕಾವ್ಯಾತ್ಮಕವಾಗಿ ಬಿಡಿಸಿಡುತ್ತಾರೆ. ಮೈ–ಮನಗಳ ನಡುವಿನ ಸಂಘರ್ಷ, ಕುಟುಂಬದ ನಿರಾಕರಣೆ ಮತ್ತು ಸಮಾಜದ ಅವಹೇಳನಗಳ ನಡುವೆಯೂ ಕವಯಿತ್ರಿ ತನ್ನ ವ್ಯಕ್ತಿತ್ವವನ್ನು ಎದೆಗುಂದದೆ ಪ್ರತಿಪಾದಿಸಿದ್ದಾರೆ. ಹಿರಿಯ ಸಾಹಿತಿ ಡಾ. ಕೆ. ಷರೀಫಾ ಅವರು ಮುನ್ನುಡಿಯಲ್ಲಿ ಹೇಳುವಂತೆ "ಈ ಕೃತಿಯು ಕನ್ನಡ ಸಾಹಿತ್ಯಕ್ಕೆ ಹೊಸದೊಂದು ಅನುಭವ ಲೋಕವನ್ನು ಪರಿಚಯಿಸುವ ಹಾಗೂ ನಮ್ಮ ಅರಿವಿನ ಕಣ್ಣು ತೆರೆಸುವ ಪ್ರಯತ್ನವಾಗಿದೆ." ಈ

ಸಂಕಲನವು ಕನ್ನಡದಲ್ಲಿ ತೃತೀಯ ಲಿಂಗಿ ಸಮುದಾಯದಿಂದ ಬಂದ ಎರಡನೇ ಕವನ ಸಂಕಲನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.[1] ಅಕ್ಕಯ್ ಪದ್ಮಶಾಲಿ ಅವರಂತಹ ಹೋರಾಟಗಾರ್ತಿಯ ಮಾರ್ಗದರ್ಶನದಲ್ಲಿ ರೂಪುಗೊಂಡ ಈ ಕೃತಿಯು ಕೇವಲ ಸಾಹಿತ್ಯಿಕ ಆಸಕ್ತಿಯನ್ನಷ್ಟೇ ಅಲ್ಲದೆ, ಈ ಸಮುದಾಯಕ್ಕೆ ಸಿಗಬೇಕಾದ ರಾಜಕೀಯ ಹಕ್ಕುಗಳು ಮತ್ತು ಮಾನವೀಯ ಗೌರವದ ಕುರಿತಾದ ಹಕ್ಕೊತ್ತಾಯವನ್ನು ಒಳಗೊಂಡಿದೆ.

ಕವಿತೆಗಳು ರೂಪಕ, ಉಪಮೆಗಳಿಂದ ಕೂಡಿರುವುದು ಸಾಮಾನ್ಯ. ಆದರೆ ಇಲ್ಲಿ ಕವಯಿತ್ರಿ ಸಮಾಜದಲ್ಲಿರುವ ಅಜ್ಞಾನ ಮತ್ತು ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವ ಸಲುವಾಗಿ ಕವನ ಸಂಕಲನದ ಆರಂಭದಲ್ಲೇ ಅತ್ಯಂತ ಅಪರೂಪವಾದ ಮತ್ತು ಪ್ರಬುದ್ಧವಾದ ಕವಿತೆಗಳನ್ನು ನೀಡಿದ್ದಾರೆ. 'ಲಿಂಗ' ಎಂಬ ಕವಿತೆಯಲ್ಲಿ 'ಲಿಂಗ'ದ ಪರಿಕಲ್ಪನೆಯನ್ನು ಅತ್ಯಂತ ನೇರವಾಗಿ ಹಾಗೂ ವೈಜ್ಞಾನಿಕವಾಗಿ ಬಿಡಿಸಿಡುತ್ತಾರೆ. ಜನನಾಂಗಗಳ ಆಧಾರದ ಮೇಲೆ ಮಾಡಲಾಗಿರುವ ಗಂಡು, ಹೆಣ್ಣು ಮತ್ತು ಅಂತರ್ಲಿಂಗಿ ಎಂಬ ಗುರುತನ್ನು ಹಾಗೂ ಸಮಾಜ ಸೃಷ್ಟಿಸಿರುವ ಪ್ರಥಮ, ದ್ವಿತೀಯ ಹಾಗೂ ತೃತೀಯ ಲಿಂಗ ಎಂಬ ಶ್ರೇಣೀಕೃತ ವ್ಯವಸ್ಥೆಯನ್ನು "ಪ್ರಮಾಣಿಸಿದವರಾರು?" (ಪು.03) ಎಂದು ಮಾಳವಿಕಾ ಅವರು ತೀಕ್ಷ್ಣವಾಗಿ ಪ್ರಶ್ನಿಸುತ್ತಾರೆ. ವಿಶೇಷವಾಗಿ ಪ್ರಾಣಿ, ಪಕ್ಷಿ, ಸಸಿ ಮತ್ತು ನಿರ್ಜೀವ ವಸ್ತುಗಳಿಗೆ ಬಳಸುವ 'ನಪುಂಸಕ' ಎಂಬ ಪದವನ್ನು ಮನುಷ್ಯರಾದ ತಮಗೆ ಬಳಸಿರುವುದರ ವಿರುದ್ಧ ತೀವ್ರ ಆಕ್ರೋಶ ಮತ್ತು ನೋವನ್ನು ವ್ಯಕ್ತಪಡಿಸುತ್ತಾರೆ. "ಅವರಿಗೆ ವಿವೇಚನೆ ಮತ್ತು ಭಾವನೆಗಳಿರುವ ನಮಗೂ ನಪುಂಸಕ ಲಿಂಗಕ್ಕೂ ವ್ಯತ್ಯಾಸ ತಿಳಿಯದೋ!?" (ಪು.04) ಎಂದು ಕೇಳುತ್ತಾ ಸಮಾಜದ ಅಮಾನವೀಯ ಧೋರಣೆಯನ್ನು ಬಯಲು ಮಾಡುತ್ತಾರೆ.

ನಂತರದ ಕವಿತೆ 'ಲಿಂಗತ್ವ'ದಲ್ಲಿ ಲಿಂಗ (ಜೈವಿಕ ಶರೀರ–Sex) ಮತ್ತು ಲಿಂಗತ್ವದ (ಸಾಮಾಜಿಕ ನಡವಳಿಕೆ–Gender) ನಡುವಿನ ವ್ಯತ್ಯಾಸವನ್ನು ಸ್ಪಷ್ಟವಾಗಿ ಕಟ್ಟಿಕೊಡುತ್ತಾರೆ. 'ಜೆಂಡರ್' ಎಂದರೆ ಕೇವಲ ದೇಹವಲ್ಲ, ಅದು ಹಾವ–ಭಾವ, ನಡೆ–ನುಡಿ, ವೇಷ–ಭೂಷಣ ಹಾಗೂ ಅಸ್ತಿತ್ವ ಎಂಬುದಾಗಿ ವ್ಯಾಖ್ಯಾನಿಸುತ್ತಾ, ಅಂತಿಮವಾಗಿ 2014ರ ನಲ್ಸಾ ತೀರ್ಪನ್ನು ಉಲ್ಲೇಖಿಸಿ, "ನಮ್ಮ ಗುರುತು ನಮ್ಮ ಹಕ್ಕು, ನಮ್ಮ ಲಿಂಗತ್ವ ನಮ್ಮ ಹಕ್ಕು, ಇದ ನಿರ್ಧರಿಸುವುದು ನಮ್ಮ ಹಕ್ಕು, ಅದ ಪ್ರಮಾಣಿಸುವುದೂ ನಮ್ಮ ಹಕ್ಕು" (ಪು.05) ಎಂದು ದಿಟ್ಟವಾಗಿ ಘೋಷಿಸುತ್ತಾರೆ. ಮುಂದಿನ ಕವಿತೆ 'ಲೈಂಗಿಕತೆ'ಯಲ್ಲಿ ಲೈಂಗಿಕತೆಯನ್ನು ಕೇವಲ ದೈಹಿಕ ಕ್ರಿಯೆ ಅಥವಾ ವಿಕೃತಿಯಾಗಿ ನೋಡದೆ ಅದು ಒಬ್ಬ ವ್ಯಕ್ತಿಯ ಒಲವು, ಆಕರ್ಷಣೆ, ಆಯ್ಕೆ ಮತ್ತು ಅಭಿವ್ಯಕ್ತಿಯ ರೂಪ ಎಂದು ಸಾರುತ್ತಾರೆ. ಸಮಾಜಕ್ಕೆ ಅರ್ಥವಾಗುವ ಸರಳ ಭಾಷೆಯಲ್ಲಿ ಹೆಟ್ರೋಸೆಕ್ಸುವಲ್, ಹೋಮೋಸೆಕ್ಸುವಲ್ ಹಾಗೂ ಬೈಸೆಕ್ಸುವಲ್ ಪರಿಕಲ್ಪನೆಗಳನ್ನು ತಂದಿದ್ದಾರೆ.

ಮಾಳವಿಕಾ ಅವರು ತಮ್ಮ 'ದೇಹ ಒಂದು, ನಾಮ ಹಲವು' ಎಂಬ ಕವಿತೆಯಲ್ಲಿ ಕರ್ನಾಟಕದ ದೇಸೀ ಸಂದರ್ಭದಲ್ಲಿ ಬಳಕೆಯಲ್ಲಿರುವ, ಸಮಾಜ ಮತ್ತು ಇತಿಹಾಸ ನೀಡಿರುವ ಲೈಂಗಿಕ ಅಲ್ಪಸಂಖ್ಯಾತರ ವೈವಿಧ್ಯಮಯ ಸ್ಥಳೀಯ ಹೆಸರುಗಳನ್ನು ದಾಖಲಿಸಿರುವುದು ಕವಿತೆಗೆ ಸಮಾಜಶಾಸ್ತ್ರೀಯ ಆಯಾಮವನ್ನು ನೀಡುತ್ತದೆ. "ಲಿಂಗನಿಂದನೆಯ ಕೋಡ್‌ವರ್ಡ್ಸ್‌ಗಳಲ್ಲ ನಮ್ಮ ನಾಮಗಳು" (ಪು.10) ಎಂಬ ಕವನದ ಮೊದಲ ಸಾಲೇ ಈ ಸಮುದಾಯದ ಬಗೆಗಿನ ಸಾಮಾಜಿಕ ಅಣಕಕ್ಕೆ ಪ್ರಬಲವಾದ ಹೊಡೆತವನ್ನು ನೀಡುತ್ತದೆ. ಸಮುದಾಯವು ಇತ್ತೀಚಿನ ಆಧುನಿಕ ಸೃಷ್ಟಿಯಲ್ಲ ಎಂಬುದಕ್ಕೆ ಮಹಾಭಾರತದ ಬೃಹನ್ನಳೆ, ಶಿಖಂಡಿಯಂತಹ ಪೌರಾಣಿಕ ಹೆಸರುಗಳನ್ನು ಹಾಗೂ ಕರ್ನಾಟಕದ ಜಾನಪದ ಪರಿಸರದಲ್ಲಿರುವ ಜೋಗತಿ, ಜೋಗಮ್ಮ, ಶಿವಶಕ್ತಿ ಎಂಬ ಸಾಂಸ್ಕೃತಿಕ ಹೆಸರುಗಳನ್ನು ಪ್ರಸ್ತಾಪಿಸುತ್ತಾ, ತಮಗಿರುವ ಸುದೀರ್ಘ ಇತಿಹಾಸವನ್ನು ನೆನಪಿಸುತ್ತಾರೆ. ಕವಿತೆಯು ಮುಂದುವರಿಯುತ್ತಾ ಕೇವಲ ಸಾಂಪ್ರದಾಯಿಕ ಹೆಸರುಗಳಿಗೆ ಮಾತ್ರ ಸೀಮಿತವಾಗದೆ, ಆಧುನಿಕ ಜಗತ್ತಿನ ಟ್ರಾನ್ಸ್‌ಜೆಂಡರ್ಸ್ (ಸಾಮಾಜಿಕ ನಾಮ) ತೃತೀಯ ಲಿಂಗಿಗಳು (ಕಾನೂನಾತ್ಮಕ ನಾಮ) ಮತ್ತು ಎಲ್‌ಜಿಬಿಟಿಕ್ಯುಐಪ್ಲಸ್ (ಜಾಗತಿಕ ಗುರುತಿನ ಸಂಕ್ಷಿಪ್ತ ನಾಮ) ಎಂಬ ಪರಿಕಲ್ಪನೆಗಳನ್ನು ನಮ್ಮೆದುರಿಗೆ ತಂದು ನಿಲ್ಲಿಸುತ್ತದೆ. ಕವನದ ಕೊನೆಯಲ್ಲಿ "ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರು, ಇದು ನಮ್ಮ ರಾಜಕೀಯ ನಾಮ, ಇದೇ ನಮ್ಮನ್ನು ಪರಿಚಯಿಸುವ ಪರಿಪೂರ್ಣ ನಾಮ" (ಪು.10) ಎನ್ನುತ್ತಾ ತಾವು ಸಮಾಜಕ್ಕೆ ಕೇವಲ ಧಾರ್ಮಿಕ ಅಥವಾ ಕೌತುಕದ ವಸ್ತುವಾಗುಳಿಯದೆ, ಪ್ರಜ್ಞಾವಂತ ರಾಜಕೀಯ ಶಕ್ತಿಯಾಗಿ ಗುರುತಿಸಿಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾರೆ. ಈ ಕವಿತೆ ಇಡೀ ಸಮುದಾಯದ ಮೇಲಿದ್ದ ಅದೃಶ್ಯತೆಯ ಪರದೆಯನ್ನು ಸರಿಸಿ, ಅವರಿಗೆ ಒಂದು ಭದ್ರವಾದ ಇತಿಹಾಸ ಮತ್ತು ವರ್ತಮಾನದ ಅಸ್ಮಿತೆಯನ್ನು ಒದಗಿಸಿಕೊಡುತ್ತದೆ.

'ನಾವ್ಯಾರು?' ಎಂಬ ಶೀರ್ಷಿಕೆಯ ಕವಿತೆ ಕುಟುಂಬವಿಲ್ಲದ ಅನಾಥರು, ಆಸ್ತಿ ಇಲ್ಲದ ಬಡವರು, ಜಾತಿವ್ಯವಸ್ಥೆಯ ಬಲಿಪಶುಗಳಾದ ದಲಿತರು, ಅವಕಾಶ, ಅಕ್ಷರ, ಧ್ವನಿಗಳಿಲ್ಲದ ದಮನಿತರು ಮತ್ತು ಅನಿವಾರ್ಯವಾಗಿ ಭಿಕ್ಷಾಟನೆ ಹಾಗೂ ಲೈಂಗಿಕ ವೃತ್ತಿಗೆ ತಳ್ಳಲ್ಪಟ್ಟವರನ್ನು ಪಟ್ಟಿ ಮಾಡಿಕೊಡುತ್ತಾ ಹೋಗುತ್ತದೆ. ಕೊನೆಯಲ್ಲಿ "ಮೇಲಿನೆಲ್ಲರನ್ನು ಪ್ರತಿನಿಧಿಸುವ ನಾವ್ಯಾರು?" (ಪು.12) ಎಂದು ಕೇಳುವ ಪ್ರಶ್ನೆ ಓದುಗರ ಮನಸ್ಸನ್ನು ತಲ್ಲಣಗೊಳಿಸುತ್ತದೆ. ಇಡೀ ಸಮಾಜದ ಎಲ್ಲಾ ಬಗೆಯ ನಿರ್ಲಕ್ಷ್ಯ, ಶೋಷಣೆ ಮತ್ತು ವಂಚನೆಗಳನ್ನು ಏಕಕಾಲಕ್ಕೆ ಅನುಭವಿಸುವ ಲೈಂಗಿಕ ಅಲ್ಪಸಂಖ್ಯಾತರ ಬಹುಮುಖಿ ದುರಂತಕ್ಕೆ ಈ ಕವಿತೆ ಸಾಕ್ಷಿಯಾಗುತ್ತದೆ.

ಮೇಲಿನ ಈ ಐದೂ ಕವಿತೆಗಳು ಕವನ ಸಂಕಲನಕ್ಕೆ ಒಂದು ಪೀಠಿಕೆ ಅಥವಾ ಪದಕೋಶದಂತೆ ಕೆಲಸ ಮಾಡುತ್ತವೆ. ಸಮಾಜಕ್ಕೆ ಮೊದಲು ತಾವು ಯಾರು? ತಮ್ಮ ಅಸ್ತಿತ್ವದ ಸ್ವರೂಪವೇನು? ಎಂಬುದನ್ನು ಸೈದ್ಧಾಂತಿಕವಾಗಿ ಮನವರಿಕೆ ಮಾಡಿಕೊಟ್ಟ ನಂತರವೇ ಮುಂದಿನ ಕವಿತೆಗಳಲ್ಲಿ ಮಾಳವಿಕಾ ಅವರು ವೈಯಕ್ತಿಕ ನೋವು, ಕೌಟುಂಬಿಕ ಹಿಂಸೆ ಮತ್ತು ಆಂತರಂಗಿಕ ತೊಳಲಾಟದ ಕವಿತೆಗಳ ಕಡೆಗೆ ಹೆಜ್ಜೆ

ಇಡುತ್ತಾರೆ.

ಪ್ರತಿಯೊಬ್ಬ ತೃತೀಯ ಲಿಂಗಿಗೂ ಎದುರಾಗುವ ಮೊದಲ ಸಂಕಟಕರವಾದ ಕಟು ವಾಸ್ತವವೆಂದರೆ ಅದು ಕೌಟುಂಬಿಕ ನಿರಾಕರಣೆ. ಇದನ್ನು ಮಾಳವಿಕಾ ಅವರ ಹಲವು ಕವಿತೆಗಳು ಬಯಲು ಮಾಡುತ್ತವೆ. 'ಮನೆ/ಕುಟುಂಬ'ದಲ್ಲಿನ ಪ್ರೀತಿ, ವಿಶ್ವಾಸದ ಕೊರತೆಯನ್ನು ಎತ್ತಿ ತೋರಿಸುತ್ತಾ, ತಮ್ಮ ಮೂಲಭೂತ ಅಸ್ತಿತ್ವವನ್ನೇ ಒಪ್ಪಿಕೊಳ್ಳದ ರಕ್ತ ಸಂಬಂಧಗಳು ಹೇಗೆ ಕೇವಲ ನಾಲ್ಕು ಗೋಡೆಗಳ ನಡುವಿನ ಬಂಧನವಾಗುತ್ತವೆ ಎಂಬುದನ್ನು ಹೇಳುತ್ತಾರೆ. ಸಾಮಾನ್ಯವಾಗಿ ದಂಪತಿಗಳ ನಡುವೆ ನಡೆಯುವ ಸಂಘರ್ಷ ಎಂಬ ರೂಢಿಗತ ಅರ್ಥವಿರುವ 'ಗೃಹಹಿಂಸೆ' ಎಂಬ ಪರಿಕಲ್ಪನೆಯ ವ್ಯಾಖ್ಯಾನವನ್ನೇ 'ಗೃಹಹಿಂಸೆ' ಕವಿತೆಯು ಬದಲಾಯಿಸುತ್ತದೆ. ಹೆತ್ತವರಿಂದಾಗುವ ಮಗುವಿನ ಅಸ್ಮಿತೆಯ ಹರಣ, ಜೈವಿಕ ಲಿಂಗದ ಆಧಾರದ ಮೇಲೆ ಗಂಡು ಮಕ್ಕಳಂತೆಯೇ ಇರಬೇಕೆಂಬ ಬಲವಂತದ ಹೇರಿಕೆ, ಕೌಟುಂಬಿಕ ಆಜ್ಞೆ, ಆದೇಶ, ಒದೆ, ಬೈಗುಳ, ಅಣಕ, ಕೊಂಕು ನುಡಿ, ದೌರ್ಜನ್ಯ, ದಬ್ಬಾಳಿಕೆ, ಗೃಹ ಬಂಧನದಂತಹ ನಿರಂತರವಾದ ದೈಹಿಕ ಮತ್ತು ಮಾನಸಿಕ ಕಿರುಕುಳವನ್ನು ಕವಿತೆ ಅತ್ಯಂತ ನೇರವಾಗಿ ದಾಖಲಿಸುತ್ತದೆ. ಒಳಗೆ ಹೆಣ್ಣಿನ ತೊಳಲಾಟವಿದ್ದರೂ, ಹೊರಗೆ ಗಂಡಿನ ವೇಷ ಧರಿಸಿ ಹೆಣ್ಣನ್ನು ಪ್ರೀತಿಸುವ, ಮದುವೆಯಾಗುವ, ಜೀವಿಸುವ, ವಂಶ ಬೆಳೆಸುವ ಒತ್ತಡ, ಅನಿವಾರ್ಯತೆಯೇ ನಿಜವಾದ 'ಗೃಹಹಿಂಸೆ'. ಇದು ಕೇವಲ ಶಾರೀರಿಕ ನೋವಲ್ಲ, ತಮ್ಮ ಮೂಲಭೂತ ಹಕ್ಕುಗಳ ಚ್ಯುತಿ ಎನ್ನುತ್ತಾರೆ ಕವಯಿತ್ರಿ.

ನಮ್ಮ ಸಮಾಜದಲ್ಲಿ ಗಂಡು ಮಗು ಹುಟ್ಟಿದರೆ ಅದು ವಂಶವನ್ನು ಬೆಳಗುವ ಕುಡಿ. ಅದೇ ಗಂಡು ಮಗುವಿನಲ್ಲಿ ಹೆಣ್ಣಿನ ಭಾವನೆಗಳು ಚಿಗುರೊಡೆದಾಗ, ಅದು ಕೇವಲ ದುಃಖವಾಗಿ ಉಳಿಯದೆ ಆ ಮಗುವಿನ ಮೇಲಿನ ಕ್ರೌರ್ಯವಾಗಿ ಬದಲಾಗುವ ಚಿತ್ರಣ 'ತಿರಸ್ಕೃತಳು' ಕವಿತೆಯಲ್ಲಿ ಕಾಣಿಸುತ್ತದೆ. ಮನೆಯವರೇ ಅಂತಹ ವ್ಯಕ್ತಿಯನ್ನು ಅಪಹಾಸ್ಯದ ವಸ್ತುವನ್ನಾಗಿ ನೋಡುವುದು, ನಿರ್ಲಕ್ಷಿಸುವುದು ಮತ್ತು ಪ್ರತಿಯೊಂದು ಹೆಜ್ಜೆಯಲ್ಲೂ ಅವಮಾನಿಸುವುದು ಆ ಜೀವವನ್ನು ಹೈರಾಣಾಗಿಸುತ್ತವೆ. ಇದು ಇಷ್ಟಕ್ಕೇ ನಿಲ್ಲದೆ ತಮ್ಮ ಹುಸಿ ಪ್ರತಿಷ್ಠೆಗೆ ಧಕ್ಕೆ ತರುವ ಈ ಜೀವ ಬದುಕಿರುವುದಕ್ಕಿಂತ ಸಾಯುವುದೇ ಲೇಸು ಎಂದು ಯೋಚಿಸುವ ಹೆತ್ತವರ ಕ್ರೌರ್ಯ, ಅಂತಹ ವ್ಯಕ್ತಿಗೆ ಸಾವು ಬರಲಿ ಎಂದು ಹಾರೈಸುವ ಅವರ ಮನಸ್ಥಿತಿ, ಇಲ್ಲವೇ, ತಾವೇ ಆ ಜೀವಿಯನ್ನು ಮುಗಿಸಿಬಿಡುವ ಆಲೋಚನೆಗಳ ಕರಾಳತೆಯನ್ನು ಕವಿತೆ ತೀಕ್ಷ್ಣವಾಗಿ ದಾಖಲಿಸುತ್ತದೆ.

ತೃತೀಯ ಲಿಂಗಿ ಸಮುದಾಯಕ್ಕೆ ಕೌಟುಂಬಿಕ ಬೆಂಬಲ ಸಿಗದಿರುವುದರ ಜೊತೆಗೆ, ಪರಿಶುದ್ಧ ಸ್ನೇಹದ ಕೊರತೆಯೂ ಇರುವುದನ್ನು ಮಾಳವಿಕಾ ಅವರು ಆರ್ದ್ರವಾಗಿ ಚಿತ್ರಿಸಿದ್ದಾರೆ. ಈ ಪ್ರಪಂಚದಲ್ಲಿ ಎಷ್ಟೇ ಜನರಿದ್ದರೂ ತನ್ನ ಭಾವನೆಯನ್ನು ಮುಕ್ತವಾಗಿ ಹಂಚಿಕೊಳ್ಳುವ, ತನ್ನ ಅಸ್ಮಿತೆಯನ್ನು ಸಹಜವಾಗಿ ಒಪ್ಪಿಕೊಳ್ಳುವ ಸಮಾನ ಮನಸ್ಕರು ಹಾಗೂ ಸಮವಯಸ್ಕರು ಸಿಗದಿರುವುದು ಈ ಜೀವಕ್ಕೆ ದೊಡ್ಡ ಶಾಪವಾಗಿ ಪರಿಣಮಿಸುತ್ತದೆ. 'ಸ್ನೇಹ' ಎಂಬುದು ಈ ಜೀವದ ಪಾಲಿಗೆ ಅಮಾವಾಸ್ಯೆಯ

ಚಂದಿರನಂತೆ (ಕಾಣದ್ದು ಅಥವಾ ಅಸ್ತಿತ್ವದಲ್ಲಿ ಇಲ್ಲದ್ದು), ಅರಣ್ಯ ಹುಣ್ಣಿಮೆಯಂತೆ (ಸುಂದರವಾಗಿದ್ದರೂ ಯಾರೂ ಗಮನಿಸದಿರುವಂತದ್ದು) ಮತ್ತು ಬೇಸಿಗೆಯ ಮಳೆಯಂತೆ (ಯಾವಾಗಲೋ ಒಮ್ಮೆ ಬಂದು ಕ್ಷಣಿಕ ತಂಪು ನೀಡಿ ಮರೆಯಾಗುವಂತದ್ದು) ಭಾಸವಾಗುತ್ತದೆ. ಇಲ್ಲಿ ಬಳಕೆಯಾಗಿರುವ ಈ ಅದ್ಭುತ ರೂಪಕಗಳು ಮಾಳವಿಕಾ ಅವರ ಕಾವ್ಯಶಕ್ತಿಗೆ ದಟ್ಟ ಸಾಕ್ಷಿಯಾಗಿ ನಿಲ್ಲುತ್ತವೆ.

ಹಾಗೆಯೇ 'ಆಟದ ಕೂಟ' ಎಂಬ ಕವಿತೆಯಲ್ಲಿ ಬಾಲ್ಯದ ಅತ್ಯಂತ ಸುಂದರ ಕ್ಷಣಗಳಾಗಬೇಕಿದ್ದ ಆಟಗಳು ಹೇಗೆ ದುರಂತವಾಗಿ ಬದಲಾಗುತ್ತದೆ ಎಂಬುದನ್ನು ಕವಯಿತ್ರಿ ಹಿಡಿದಿಟ್ಟಿದ್ದಾರೆ. ಗಂಡುಮಕ್ಕಳು ಇದನ್ನೇ ಆಡಬೇಕು, ಹೆಣ್ಣುಮಕ್ಕಳು ಅದನ್ನೇ ಆಡಬೇಕು ಎಂದು ಸಮಾಜವು ಬಾಲ್ಯದಲ್ಲೇ ಮಕ್ಕಳ ಆಟಗಳ ಮೇಲೆ ಹಾಕುವ ಲಿಂಗದ ಬೇಲಿಯ ನಡುವೆ ತನ್ನ ಅಂತರಂಗದ ಹೆಣ್ಣುತನಕ್ಕೆ ಒಪ್ಪುವ ಆಟಗಳ ಕಡೆಗೆ ಆ ಗಂಡುಮಗು ಆಕರ್ಷಿತವಾದಾಗ ಸಮಾಜಕ್ಕೆ ಅದು ಅಸಹಜವಾಗಿ ಕಾಣುತ್ತದೆ. ಆಟವಾಡುತ್ತಾ ಖುಷಿಪಡಬೇಕಾದ ವಯಸ್ಸಿನಲ್ಲಿ ಸಹಪಾಠಿಗಳು ಮತ್ತು ಗೆಳೆಯರು ಆಡುವ ಅಣಕದ ಮಾತುಗಳು, ಚುಡಾಯಿಸುವಿಕೆಯಿಂದಾಗಿ, ಆಟದ ಸಹಜ ಆನಂದವೇ ಇಲ್ಲದಂತಾಗಿ ಪ್ರತಿಯೊಂದು ಆಟವೂ ಶಿಕ್ಷೆಯಾಗಿ, ಅವಮಾನದ ವೇದಿಕೆಯಾಗಿ ಬದಲಾಗುತ್ತದೆ. ಈ ಸರಣಿ ಅವಮಾನಗಳ ಅಂತಿಮ ಪರಿಣಾಮವಾಗಿ ಆ ಮಗುವು ಹೊರ ಜಗತ್ತಿನಿಂದ ಸಂಪೂರ್ಣ ವಿಮುಖವಾಗುತ್ತದೆ. ನಿಜವಾದ ಸ್ನೇಹ ಮರೆಯಾಗಿ, ಬಾಹ್ಯ ಪ್ರಪಂಚದ ಕ್ರೌರ್ಯಕ್ಕೆ ಹೆದರಿ ನಾಲ್ಕು ಗೋಡೆಗಳ ನಡುವಿನ ಏಕಾಂತವನ್ನೇ ಸುರಕ್ಷಿತ ಲೋಕವಾಗಿ ಪರಿಭಾವಿಸುತ್ತದೆ.

ಸಮಾಜವು ತನ್ನ ಸಣ್ಣತನದಿಂದಾಗಿ ಇವರನ್ನು ಕೇವಲ ಹಾಸ್ಯದ ಅಥವಾ ಕುತೂಹಲದ ವಸ್ತುವನ್ನಾಗಿ ನೋಡುತ್ತದೆಯೇ ಹೊರತು ತಮ್ಮಂತೆ ಮನುಷ್ಯರೆಂಬುದಾಗಿ ನೋಡುವುದಿಲ್ಲ. ಈ ಸಣ್ಣತನವೇ ಇವರ ಸುತ್ತ ಒಂದು ಅಗೋಚರ ಗೋಡೆಯನ್ನು ನಿರ್ಮಿಸಿ, ಇವರು ಸ್ನೇಹಕ್ಕಾಗಿ ಹಂಬಲಿಸುವಂತೆ ಮಾಡುತ್ತದೆ. ಲೋಕದ ದೃಷ್ಟಿಯಲ್ಲಿ ಒಬ್ಬ ಮನುಷ್ಯನಾಗಿ ಕಾಣಿಸಿಕೊಳ್ಳಲು ಬೇಕಾದ ಅರ್ಹತೆಗಳನ್ನು ಲಿಂಗತ್ವದ ಆಧಾರದ ಮೇಲೆ ಅಳೆಯುವ ಸಮಾಜದ ಸಂಕುಚಿತ ಮನೋಭಾವವು ಕವಯಿತ್ರಿಯನ್ನು 'ಏಕಾಂಗಿ'ಯನ್ನಾಗಿ ಮಾಡುತ್ತದೆ. ಆದರೆ ಇದೇ ಹೊತ್ತಿನಲ್ಲಿ ಮನುಷ್ಯ ಸಂಬಂಧಗಳ ಬದಲಿಗೆ 'ಪುಸ್ತಕ'ಗಳು ಆ ಜೀವದ ಬದುಕಿನಲ್ಲಿ ಪ್ರವೇಶಿಸಿ, ನಿಷ್ಠಾವಂತ ಸಂಗಾತಿಗಳಾಗಿ ಆ ಒಂಟಿತನಕ್ಕೆ ಹೊಸ ಅರ್ಥ ನೀಡುತ್ತವೆ. ಹೀಗೆ ಸಾಂಪ್ರದಾಯಿಕ ವ್ಯವಸ್ಥೆಯು ಒಂದು ಮುಗ್ಧಜೀವದ ಬಾಲ್ಯ ಮತ್ತು ಸ್ನೇಹದ ಬದುಕನ್ನು ಹೇಗೆ ಕಸಿದುಕೊಳ್ಳುತ್ತದೆ ಎಂಬುದನ್ನು ಮಾಳವಿಕಾ ಅವರ ಕವಿತೆಗಳು ನಿಖರವಾಗಿ ದಾಖಲಿಸುತ್ತವೆ.

ಮಾಳವಿಕಾ ಅವರ ಈ ಕವನ ಸಂಕಲನವು ತೃತೀಯಲಿಂಗಿ ಸಮುದಾಯದ ಅಂತರಂಗದ ಹಲವು ಭಾವನೆಗಳ ಮಗ್ಗುಲುಗಳನ್ನು ಪರಿಚಯಿಸುತ್ತಾ ಹೋಗುತ್ತದೆ. ಅದರಲ್ಲಿ 'ಪ್ರೀತಿ'ಯೂ ಒಂದು. ಇಲ್ಲಿನ ಕವಿತೆಗಳಲ್ಲಿ ಪ್ರೀತಿಯ ಹಂಬಲ, ಅದರ

ನಿರಾಕರಣೆ ಮತ್ತು ಅಂತಿಮವಾಗಿ ದಕ್ಕುವ ಪ್ರೀತಿಯ ಸಾಫಲ್ಯ ಅತ್ಯಂತ ಭಾವುಕವಾಗಿ ಮೂಡಿಬಂದಿದೆ. 'ಪ್ರೀತಿ' ಕವಿತೆಯಲ್ಲಿ ನಿರೂಪಕಿಯ ಹೃದಯದಲ್ಲಿ ಮೂಡಿದ ಪ್ರೀತಿಯ ಅಂಕುರ, ತುಡಿತ, ತೀವ್ರತೆ ಹಂತಹಂತವಾಗಿ ಸ್ಪಷ್ಟವಾಗಿ ದಾಖಲಾಗುತ್ತಾ ಹೋಗುತ್ತದೆ. ಆದರೆ ಸಮಾಜದ ಕ್ರೌರ್ಯ ಎದುರು ನಿಂತು ಆಗುವ ನಿರಾಸೆ, ಆ ಭಾವನೆಯನ್ನು ತಡೆಹಿಡಿಯಲು ಮಾಡುವ ಪ್ರಯತ್ನ, ಅದರಲ್ಲಾಗುವ ಸೋಲು, ಮನ ಮತ್ತು ಬುದ್ಧಿಯ ನಡುವಿನ ತಾಕಲಾಟ ಎದ್ದು ಕಾಣುತ್ತದೆ. ತಾನು ಅನುಭವಿಸುತ್ತಿರುವ ಕಡೆಗಣನೆಗೆ ಮದ್ದಾಗಿ ಒಂದು ಬೆಚ್ಚಗಿನ ಅಪ್ಪುಗೆ ಮತ್ತು ಸಾಂತ್ವನದ ನುಡಿಗಾಗಿ ಆ ಜೀವ ಹಂಬಲಿಸುತ್ತದೆ. ಆದರೆ 'ಬೇಡ ಮನವೇ' ಕವಿತೆಗೆ ಬಂದಾಗ ಈ ಹಂಬಲವು ನೋವಾಗಿ ಬದಲಾಗುತ್ತದೆ. ಸಮಾಜದ ಸಣ್ಣತನ ಮತ್ತು ಲಿಂಗತ್ವದ ತಾರತಮ್ಯದ ಕಾರಣದಿಂದ ಪ್ರೀತಿ ಎಂಬುದು ತನಗೆ ಒಲಿಯದ ಮರೀಚಿಕೆ ಎಂದು ಭಾವಿಸುವ ಕವಯಿತ್ರಿ ಪದೇ ಪದೇ ನೋವುಣ್ಣುವ ಬದಲು "ಆಕಾಶಕ್ಕೆ ಏಣಿ ಹಾಕಬೇಡ, ಪಾತಾಳಕ್ಕೆ ಇಳಿಯಬೇಡ, ಅತಿ ಆಸೆ ಗತಿಗೇಡು, ಇದು ನಿನಗೆ ಬೇಡ, ಬೇಡ ಮನವೇ ಬೇಡ" (ಪು.39) ಎಂಬುದಾಗಿ ತನ್ನ ಮನಸ್ಸಿಗೆ ತಾನೇ ಸಾಂತ್ವನ ಹೇಳಿಕೊಳ್ಳುತ್ತಾರೆ. ಆದರೆ ಕವನ ಸಂಕಲನದ ಮುಂದಿನ ಭಾಗದಲ್ಲಿ ಈ ಚಿತ್ರಣ ಸಂಪೂರ್ಣವಾಗಿ ಬದಲಾಗುತ್ತದೆ. 'ನನ್ನವನು' ಮತ್ತು 'ಮಿಲನ' ಕವಿತೆಗಳಲ್ಲಿ ತನ್ನಂತವರಿಗೂ ಈ ಲೋಕದಲ್ಲಿ ಪ್ರಾಮಾಣಿಕವಾದ ಪ್ರೀತಿ ದಕ್ಕಬಲ್ಲದು ಎಂಬ ಆಶಾವಾದ ಮತ್ತು ವಿಶ್ವಾಸ ವ್ಯಕ್ತವಾಗಿದೆ. ತನ್ನ ಅಸ್ಮಿತೆಯನ್ನು, ತನ್ನ ಇರುವಿಕೆಯನ್ನು ಯಾವುದೇ ಮುಖವಾಡವಿಲ್ಲದೆ ಒಪ್ಪಿಕೊಳ್ಳುವ 'ನನ್ನವನು' ಸಿಕ್ಕಾಗ ಉಂಟಾಗುವ ಧನ್ಯತೆ ಇಲ್ಲಿ ಕಾಣಿಸುತ್ತದೆ. 'ಮಿಲನ' ಕವಿತೆಯು ದೈಹಿಕ ಮತ್ತು ಮಾನಸಿಕ ಭಾವನೆಗಳ ಸುಂದರ ಸಂಗಮವನ್ನು ಚಿತ್ರಿಸುತ್ತಾ, ಸಮಾಜ ಹೊರಗಿಟ್ಟರೂ ಒಬ್ಬ ವ್ಯಕ್ತಿಯ ಒಡನಾಟದಲ್ಲಿ ತನ್ನ ಅಸ್ತಿತ್ವಕ್ಕೆ ಪೂರ್ಣತೆ ಸಿಕ್ಕ ಬಗೆಯನ್ನು ಸಾರುತ್ತದೆ.

ಮಾಳವಿಕಾ ಅವರ 'ವಿವಾಹವೋ? ಅಥವಾ ನೀ ವಿವಾದವೋ!', 'ವಿವಾಹಾಸ್ತ' ಮತ್ತು 'ಯಕ್ಷಪ್ರಶ್ನೆ' ಕವಿತೆಗಳು ತೃತೀಯ ಲಿಂಗಿ ಸಮುದಾಯದ ಬದುಕಿನಲ್ಲಿ 'ಮದುವೆ' ಎಂಬ ಸಾಮಾಜಿಕ ಸಂಸ್ಥೆ ತಂದೊಡ್ಡುವ ಸಂಕೀರ್ಣ ಸವಾಲುಗಳನ್ನು ಪರಿಣಾಮಕಾರಿಯಾಗಿ ಬಿಂಬಿಸುತ್ತವೆ. ಮದುವೆಯು ಪ್ರೀತಿಯ ಸಂಕೇತವಾಗುವ ಬದಲು ಒಂದು ವಿವಾದವಾಗಿ ಸಮಾಜದಲ್ಲಿ ಚರ್ಚಿತವಾಗಿರುವ ಬಗೆಯನ್ನು ಕವಯಿತ್ರಿ ಪ್ರಶ್ನಿಸುತ್ತಲೇ, ವಿಶೇಷ ವಿವಾಹ ಕಾಯ್ದೆ ಅಡಿಯಲ್ಲಿ ತಮ್ಮನ್ನೂ ಒಳಗೊಳ್ಳಬೇಕು ಎಂಬ ಹಕ್ಕೊತ್ತಾಯವನ್ನು ಮಂಡಿಸುತ್ತಾರೆ. ಪ್ರೀತಿ ಮತ್ತು ಸಹಬಾಳ್ವೆಗೆ ಲಿಂಗತ್ವದ ಹಂಗಿರಬಾರದು ಎಂಬ ಆಶಯವನ್ನು ವ್ಯಕ್ತಪಡಿಸುತ್ತಾ, ಸಾಮಾಜಿಕ ಮಾನ್ಯತೆ ಹಾಗೂ ಸಂವಿಧಾನಬದ್ಧ ಹಕ್ಕಿನ ಘೋಷಣೆಯನ್ನು ಮುಂದಿಡುತ್ತಾರೆ. ವಿವಾಹದ ಬಹು ಆಯಾಮಗಳನ್ನು ಚರ್ಚಿಸುತ್ತಾ, ಅದು ನೀಡುವ ಆರ್ಥಿಕ, ಸಾಮಾಜಿಕ ಮತ್ತು ಭಾವನಾತ್ಮಕ ಭದ್ರತೆಯು ನಮ್ಮ ಸಮುದಾಯಕ್ಕೂ ಅಷ್ಟೇ ಅವಶ್ಯಕ ಎಂಬುದನ್ನು ಒತ್ತಿ ಹೇಳುತ್ತಾರೆ. ಆದರೆ ಈ ಹಕ್ಕಿನ ಹೋರಾಟದ ನಡುವೆಯೂ ಮದುವೆಗೆ ಸಂಬಂಧಿಸಿದಂತೆ ಸಮಾಜ ಎಸೆಯುವ ಪ್ರಶ್ನೆಗಳು ಇವರ ಪಾಲಿಗೆ

ಯಕ್ಷಪ್ರಶ್ನೆಗಳಿಗಿಂತ ಕಠಿಣವಾಗಿ ಪರಿಣಮಿಸುವ ಅಸಹಾಯಕತೆಯನ್ನು ತೆರೆದಿಡುತ್ತಾರೆ. "ನೀ ಹೆಣ್ಣೋ ಅಥವಾ ಗಂಡೋ?", "ನಿನ್ ಮದುವೆ ಯಾವಾಗ?", "ಯಾಕೋ ಮದುವೆ ಬೇಡಾಂತೀಯ?", "ಏನಾದ್ರು ಲೈಂಗಿಕ ಆರೋಗ್ಯ ಸಮಸ್ಯೆ ಇದೆಯಾ?", "ಮದುವೆ ಆಗ್ತೀಯಾ, ಮನೆಯಿಂದ ಆಚೆ ಹೋಗ್ತೀಯಾ?" (ಪು.58,59) ಎಂಬ ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡಲಾಗದ ಮೌನ ಇಲ್ಲಿ ಕಟು ವಾಸ್ತವವಾಗಿ ದಾಖಲಾಗಿದೆ. ಕೌಟುಂಬಿಕ ಒತ್ತಡ ಮತ್ತು ಸಮಾಜದ ಕುಹಕದ ನಡುವೆ ಸಿಲುಕಿದ ಅಸಹಾಯಕ ಜೀವಕ್ಕೆ, ಕಾನೂನಿನ ಮಾನ್ಯತೆ ಸಿಗುವವರೆಗೂ ಈ ಪ್ರಶ್ನೆಗಳು ಮನುಷ್ಯತ್ವವನ್ನು ಅಳೆಯುವ ಮಾನದಂಡಗಳಾಗಿ ಕಾಡುತ್ತಲೇ ಇರುತ್ತವೆ ಎಂಬ ವಿಷಾದವನ್ನು ಈ ಕವಿತೆಗಳು ತೀವ್ರವಾಗಿ ವ್ಯಕ್ತಪಡಿಸುತ್ತವೆ.

ಸಮುದಾಯ ಎದುರಿಸುತ್ತಿರುವ ಎಲ್ಲಾ ಅಸಮಾನತೆಗಳಲ್ಲಿ ಬಹು ಮುಖ್ಯವಾದದ್ದು 'ಶಿಕ್ಷಣ'. "ಅಕ್ಷರವೆಂಬ ಅಮೃತ ಕುಡಿಯಲೇ ಇಲ್ಲ" (ಪು.64) ಎಂಬ ಕವಯಿತ್ರಿಯ ಮಾತಿನಲ್ಲಿ ಅಸ್ಮಿತೆಯೇ ಇಲ್ಲದ ಸಮುದಾಯವನ್ನು ಮೇಲೆತ್ತಲು ಅಕ್ಷರ ಎಷ್ಟು ಮಹತ್ವಪೂರ್ಣ ಪಾತ್ರ ವಹಿಸುತ್ತದೆ ಎಂಬ ಅರಿವಿದ್ದು, ಅದನ್ನು ಪಡೆಯುವ ಅವಕಾಶ ದೊರಕದೆ ಇರುವುದರ ಬಗ್ಗೆ ಇಲ್ಲಿ ಪ್ರಸ್ತಾಪಿಸುತ್ತಾರೆ. ಶಾಲಾ-ಕಾಲೇಜುಗಳಲ್ಲಿನ ಶಿಕ್ಷಕರ, ಸಹಪಾಠಿಗಳ ಅಣಕ, ಅಪಹಾಸ್ಯ, ಅವಮಾನಗಳು ಈ ವರ್ಗಕ್ಕೆ ಅಕ್ಷರವನ್ನು ಮರೀಚಿಕೆಯಾಗಿಸುವುದನ್ನು ಹೇಳುತ್ತಾ, ಸರ್ಕಾರ, ವಿದ್ಯಾ ಸಂಸ್ಥೆ, ಅಧ್ಯಾಪಕರು ಹಾಗೂ ಸಾಮಾನ್ಯ ಜನತೆಗೆ ತಮಗೂ ಶಿಕ್ಷಣವನ್ನು ಕಲ್ಪಿಸುವಂತೆ, ತನ್ಮೂಲಕ ಸಮಾನತೆಯ ಪರಿಸರವನ್ನು ನಿರ್ಮಾಣ ಮಾಡುವಂತೆ ಕೋರುತ್ತಾರೆ, ಜೊತೆಗೆ ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಪಠ್ಯಗಳು ತಮ್ಮೀ ಸಮುದಾಯವನ್ನು ಜನತೆಗೆ ಪರಿಚಯಿಸಿದಾಗ, ತಮ್ಮತನಕ್ಕೆ ಮನ್ನಣೆ ಸಿಗುತ್ತದೆ, ಲಿಂಗ ತಾರತಮ್ಯಕ್ಕೆ ಕಡಿವಾಣ ಬೀಳುತ್ತದೆ, ಸರ್ವ ಶಿಕ್ಷಣ ಅಭಿಯಾನ ಇದನ್ನು ಒಳಗೊಳ್ಳಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ.

ಹಾಗೆಯೇ 'ಕಾನೂನು'ಗಳು ಸಹ. ಅವು ತಮಗೆ ತಾವು ಮಾಡದ ಅಪರಾಧಕ್ಕೆ ಶಿಕ್ಷೆ ಕೊಡುವುದರಲ್ಲಿಯೇ ನಿರತವಾಗಿದೆಯೇ ಹೊರತು ತಮಗೆ ಸಲ್ಲಬೇಕಾದ ಹಕ್ಕುಗಳ ಕಡೆಗೆ ಗಮನ ಹರಿಸುತ್ತಿಲ್ಲ. ಹಿಂದಿನ ಮತ್ತು ಈಗಿನ ಕರಾಳ ದಿನಗಳಿಗೆ ಸಾಕ್ಷಿಯಾಗಿ ನಾಳಿನ ಒಳಿತಿಗಾಗಿ ಕಾಯುತ್ತಿರುವ ತಮ್ಮ ಬಗ್ಗೆ ಕಾನೂನು, ಶಾಸನ, ನೀತಿ, ನ್ಯಾಯಾಲಯಗಳು, ತೀರ್ಪುಗಳು, ಜನನಾಯಕರುಗಳು ಮೌನವಾಗಿರುವುದನ್ನು ಕವಯಿತ್ರಿ ನೋವಿನ ಧ್ವನಿಯಿಂದ ಖಂಡಿಸುತ್ತಾರೆ.

ತೃತೀಯ ಲಿಂಗಿ ಸಮುದಾಯದ ಅಳಲು ಸಮಾಜಕ್ಕೆ ಬರೀ ಅರಣ್ಯ ರೋದನವಾಗಿ ಪರಿಣಮಿಸಿರುವುದನ್ನು ಮಾಳವಿಕಾ ಅವರ 'ಅರಣ್ಯ ರೋದನೆ' ಕವಿತೆ ಕಟುವಾಗಿ ಚಿತ್ರಿಸುತ್ತದೆ. ಸಮುದಾಯದ ವ್ಯಕ್ತಿಗಳ ಭಾವನೆ, ಆಸೆ, ಕನಸು, ಗುರಿ, ಅಳಲು ಯಾವುದಕ್ಕೂ ಈ ಸಮಾಜ ಒಪ್ಪಿಗೆ, ಬೆಲೆ, ಆದ್ಯತೆ ನೀಡುವುದಿಲ್ಲ. ಈ ಕಿವುಡು ಮತ್ತು ಕುರುಡು ವ್ಯವಸ್ಥೆ ಒಬ್ಬ ಮನುಷ್ಯನ ಸಹಜ ಅಸ್ತಿತ್ವವನ್ನೇ ನಿರಾಕರಿಸಿ,

ಮನುಷ್ಯತ್ವವನ್ನು ಮರೆತು ಕ್ರೌರ್ಯ ಮತ್ತು ಉದಾಸೀನತೆಯಿಂದ ಈ ಜೀವಿಗಳನ್ನು ಒಂಟಿತನಕ್ಕೆ ತಳ್ಳುತ್ತದೆ ಮಾತ್ರವಲ್ಲ, ಸಾಮಾಜಿಕ ಕಟು ಬಂಧನದೊಳಗೇ ಹಿಡಿದಿಡುತ್ತದೆ ಎಂಬುದನ್ನು ಕವಿತೆಯ ಸಾಲುಗಳು ಸಾಬೀತುಪಡಿಸುತ್ತವೆ. ದೇವರು, ಹೆತ್ತವರು, ಬಂಧು-ಬಳಗ, ಸ್ನೇಹಿತರು, ಶಿಕ್ಷಕರು, ಕಾನೂನು, ನ್ಯಾಯ ವ್ಯವಸ್ಥೆ, ಕುಲಸಮುದಾಯಗಳು, ಮೌಢ್ಯ-ಸಂಸ್ಕೃತಿ ಹೀಗೆ ಆದಿಯಿಂದ ಅಂತ್ಯದವರೆಗೆ ವ್ಯವಸ್ಥೆಯ ಪ್ರತೀ ಹಂತದಲ್ಲಿಯೂ ಸಮಾಜದ ಮೋಸದ ಸುಳಿಯನ್ನು ಚಿತ್ರಿಸುವ ಕವಯಿತ್ರಿಯ ಕವಿತೆಗಳು ಲೋಕದ ದೃಷ್ಟಿಯಲ್ಲಿ ಸಭ್ಯರಂತೆ ನಟಿಸುವ ಜನರು, ಈ ಸಮುದಾಯ ಬದುಕಲು ದಾರಿ ಇಲ್ಲದಂತೆ ಮಾಡಿ, ನಂತರ ಅವರ ಬದುಕುವ ದಾರಿಯನ್ನೇ ಅಣಕಿಸುವ ವ್ಯವಸ್ಥಿತ ಮೋಸಗಾರಿಕೆಯನ್ನು ಬಯಲಿಗೆಳೆಯುತ್ತವೆ.

ಮಾಳವಿಕಾ ಅವರ ಕಾವ್ಯಜಗತ್ತು ಕೇವಲ ವೈಯಕ್ತಿಕ ನೋವಿನ ಹೊರಹಾಕುವಿಕೆಯಲ್ಲ, ಬದಲಾಗಿ ಅದು ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ಅಸ್ಮಿತೆಯನ್ನು ಮರೆಮಾಚುವ ಸಾಂಸ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳ ವಿರುದ್ಧದ ಸೈದ್ಧಾಂತಿಕ ಪ್ರತಿರೋಧವಾಗಿದೆ. ಶಿಕ್ಷಣವು ಅರಿವು ನೀಡುವ ಬದಲು ಸಂಕುಚಿತತೆಯನ್ನು ಪೋಷಿಸುತ್ತಿರುವುದು ಮತ್ತು ಕಾನೂನು ಕೇವಲ ಕಾಗದದ ಮೇಲಿನ ಭರವಸೆಯಾಗಿ ಉಳಿದಿರುವುದು ಕವಯಿತ್ರಿಯ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ. ವಿವಾಹದಂತಹ ಸಾಮಾಜಿಕ ಸಂಸ್ಥೆಗಳಲ್ಲಿ ಸಮಾನ ಸ್ಥಾನಮಾನಕ್ಕಾಗಿ ಹಂಬಲಿಸುವ ಅವರ ದನಿಯು, 'ನಲ್ಸಾ' ತೀರ್ಪಿನಂತಹ ಕಾನೂನು ಚೌಕಟ್ಟುಗಳು ಬದುಕಿನ ವಾಸ್ತವಕ್ಕೆ ಇಳಿಯಬೇಕಾದ ಅನಿವಾರ್ಯತೆಯನ್ನು ಮನಗಾಣಿಸುತ್ತದೆ. ಸಮಾಜ ಎಂಬ ಅಮೂರ್ತ ವ್ಯವಸ್ಥೆಯು ತನ್ನ ಸಣ್ಣತನದಿಂದ ಸೃಷ್ಟಿಸುವ ಸ್ಥಿತಿಗಳು, ಈ ಸಮುದಾಯವನ್ನು ಹೇಗೆ ಸಾಮಾಜಿಕ ಬಹಿಷ್ಕಾರಕ್ಕೆ ಒಳಪಡಿಸಿವೆ ಎಂಬುದಕ್ಕೆ ಕಟು ಪುರಾವೆಗಳಾಗಿ ಕಾಣಿಸುತ್ತವೆ.

ಸಂಶೋಧನಾತ್ಮಕ ದೃಷ್ಟಿಕೋನದಿಂದ ನೋಡಿದಾಗ, ಈ ಕವಿತೆಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 'ಅನ್ಯ' (The Other) ಅಸ್ಮಿತೆಗೆ ಹೊಸ ಭಾಷ್ಯವನ್ನು ಬರೆಯುತ್ತಲಿವೆ ಎನ್ನಬಹುದು. ಇಲ್ಲಿನ ಒಂಟಿತನ ಮತ್ತು ಪ್ರೀತಿಯ ಹಂಬಲವು ಕೇವಲ ವ್ಯಕ್ತಿನಿಷ್ಠವಾಗಿರದೆ, ಅವು ಸಮಾಜವು ವಿಧಿಸಿರುವ ಅಘೋಷಿತ ಬಹಿಷ್ಕಾರದ ಫಲಿತಾಂಶಗಳಾಗಿವೆ. ಮಾಳವಿಕಾ ಅವರ ಕವಿತೆಗಳು ಸಮಾಜದ ಸಂವೇದನಾಶೂನ್ಯತೆಯನ್ನು ಪ್ರಶ್ನಿಸುತ್ತಲೇ, ಮನುಷ್ಯತ್ವವನ್ನು ಲಿಂಗತ್ವದ ಮಿತಿಯಿಂದ ಹೊರತಂದು ನೋಡುವಂತೆ ಒತ್ತಾಯಿಸುತ್ತದೆ. ಕೇವಲ ಕಾಯ್ದೆ-ಕಾನೂನುಗಳಿಂದ ಮಾತ್ರವಲ್ಲದೆ, ಸಾಂಸ್ಕೃತಿಕ ಮತ್ತು ಸಾಮಾಜಿಕ ಮನಸ್ಥಿತಿಗಳ ಆಳವಾದ ಪರಿವರ್ತನೆಯಿಂದ ಮಾತ್ರ ಲೈಂಗಿಕ ಅಲ್ಪಸಂಖ್ಯಾತರಿಗೆ ಘನತೆಯ ಬದುಕು ಸಾಧ್ಯ ಎಂಬ ಸತ್ಯವನ್ನು ಸಾರುತ್ತವೆ.

## ಕೊನೆ ಟಿಪ್ಪಣಿ:

1. ತೃತೀಯ ಲಿಂಗಿ ಸಂವೇದನೆಯುಳ್ಳ ಕವಯಿತ್ರಿ ಚಾಂದಿನಿ ಅವರು ರಚಿಸಿರುವ 'ಮನದ ಕಣ್ಣು' (2015) ಎಂಬ ಕವನ ಸಂಕಲನವು ತೃತೀಯ ಲಿಂಗಿ ಸಮುದಾಯದಿಂದ ಬಂದ ಮೊದಲನೇ ಕವನ ಸಂಕಲನವಾಗಿದ್ದು, ಈ ಕೃತಿಯ ಬಗ್ಗೆ 'ಮನದ ಕಣ್ಣು: ಅಂಚಿನ ಬದುಕಿನ ಅನನ್ಯ ಅಭಿವ್ಯಕ್ತಿ' ಎಂಬ ಸಂಶೋಧನಾತ್ಮಕ ವಿಶ್ಲೇಷಣಾ ಲೇಖನವು ಪ್ರಸ್ತುತ ಲೇಖಕರಿಂದ 'ಅಭಿಜಾತ ಕನ್ನಡ' ಎಂಬ ಸಂಶೋಧನಾ ದ್ವೈಮಾಸಿಕ ಪತ್ರಿಕೆಯ ಫೆಬ್ರವರಿ–ಮಾರ್ಚ್ 2026ರ ಸಂಚಿಕೆಯಲ್ಲಿ ಪ್ರಕಟವಾಗಿದೆ.

## ಆಕರ ಗ್ರಂಥ:

1. ಲಕ್ಷ್ಮಣ್ (ಮಾಳವಿಕಾ) ಕನಕುಂಟ್ಲಾ, (2023), ಮೈ–ಮನ, ಬೆಂಗಳೂರು: ಒಂದೆಡೆ ಪ್ರಕಾಶನ.